**ಇಂದು ದಿನಾಂಕ:26.02.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : 1 ರಿಂದ 3 ಮತ್ತು 5 ನೇ ಪ್ರತಿವಾದಿ ಪರ ಶ್ರೀ.ಬಿ.ಎಂ.ಕೆ.ವಕೀಲರಿಂದಃ**

4 ನೇ ಪ್ರತಿವಾದಿ ಸುಮಾರು 18 ಗುಂಟೆ ಜಮೀನನ್ನು 9 ಮತ್ತು 10 ನೇ ಪ್ರತಿವಾದಿ ರವರಿಗೆ ಮಾರಾಟ ಮಾಡಿರುತ್ತಾರೆ. 9 ಮತ್ತು 10 ನೇ ಪ್ರತಿವಾದಿ ಸದರಿ ಜಮೀನನ್ನು ಯಾರು ಯಾರಿಗೆ ಎಷ್ಟು ಎಷ್ಟು ವಿಸ್ತೀರ್ಣ ಮಾರಾಟ ಮಾಡಿದ್ದಾರೆ ಗೊತ್ತಿಲ್ಲ. 4 ನೇ ಪ್ರತಿವಾದಿ ಮಾರಾಟ ಮಾಡಿರುವ ಜಮೀನು ನನ್ನ ತಂದೆಯ ಭಾಗಕ್ಕೆ ಬಂದ ಜಮೀನು ಆಗಿರುತ್ತದೆ. ಮಾರಾಟ ಯಾವ ತಾರೀಖು, ತಿಂಗಳು, ಇಸವಿಯಲ್ಲಿ ಆಗಿದೆ ಗೊತ್ತಿಲ್ಲ. ದಾವಾ ಸರ್ವೆ ನಂಬರ್ ಜಮೀನಿನಲ್ಲಿ ಎಷ್ಟು ಪೋಡುಗಳು ಆಗಿವೆ ಗೊತ್ತಿಲ್ಲ. ಸದರಿ ಪೋಡುಗಳು ಕಾನೂನು ಬದ್ಧವಾಗಿ ಆಗಿವೆ. ದಾವಾ ಐಟಂ.2 ಸಣ್ಣಪ್ಪನ ಹೆಸರಿನಲ್ಲಿ ಇದೆ. ಇನ್ನೊಂದು ಮನೆ ನನ್ನ ತಂದೆಯ ತಂದೆ ಮಾದಪ್ಪನ ಹೆಸರಿನಲ್ಲಿ ಇದೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇರಲಿಲ್ಲ. ನನ್ನ ಅಜ್ಜ ಮಾದಪ್ಪನ ಮಕ್ಕಳಾದ ಸಣ್ಣಪ್ಪ ಮತ್ತು ಸಿದ್ದನಾಯಕ ಭಾಗ ಮಾಡಿಕೊಂಡು ಅವರ ಹಿಸ್ಸೆಗೆ ಬಂದಿರುವ ಆಸ್ತಿಗಳ ಮೇಲೆ ನಮಗೆ ಹಕ್ಕು ಇಲ್ಲ, ಅದೇ ರೀತಿ ನಮಗೆ ಬಂದಿರುವ ಆಸ್ತಿಗಳ ಮೇಲೆ ಅವರಿಗೆ ಹಕ್ಕು ಇರುವುದಿಲ್ಲ ಎಂದರೆ ಸರಿ. ಕ್ರಯ ಪತ್ರಗಳಿಗೆ 1 ನೇ ಪ್ರತಿವಾದಿ ಮತ್ತು ಆತನ ತಂದೆ ಸಹಿಗಳನ್ನು ಮಾಡಿದ್ದಾರೆ. ಪ್ರತಿವಾದಿ 2, 3, 5 ಮತ್ತು 6 ಕ್ರಯ ಪತ್ರಗಳಿಗೆ ಸಹಿ ಮಾಡಿಲ್ಲ. 1 ನೇ ಪ್ರತಿವಾದಿ ಮತ್ತು ಸಣ್ಣಪ್ಪ ಕ್ರಯ ಪತ್ರಗಳಿಗೆ ಸಹಿ ಮಾಡಿರುವುದನ್ನು ನಾನು ನೋಡಿದ್ದೇನೆ. ಅವರು ಸಹಿ ಮಾಡಿರುವ ಕ್ರಯ ಪತ್ರಗಳನ್ನು ಯಾರ ಹೆಸರಿಗೆ ಮತ್ತು ಎಷ್ಟು ಹಣಕ್ಕೆ ಮಾಡಲಾಗಿದೆ ಹೇಳಲು ಆಗುವುದಿಲ್ಲ. ಸಾಕ್ಷಿ ದಾಖಲೆ ಹಾಜರು ಪಡಿಸಿದ್ದೇನೆ ಎನ್ನುತ್ತಾರೆ. ಕ್ರಯ ಪತ್ರಕ್ಕೆ ಸಹಿ ಮಾಡುವಾಗ 1 ನೇ ಪ್ರತಿವಾದಿ ಮತ್ತು ಸಣ್ಣಪ್ಪ ಹಣವನ್ನು ಪಡೆದುಕೊಂಡಿರುತ್ತಾರೆ. ಎಷ್ಟು ಎಷ್ಟು ಹಣ ಪಡೆದುಕೊಂಡಿದ್ದಾರೆ ಗೊತ್ತಿಲ್ಲ. ಹಣವನ್ನು 9 ಮತ್ತು 10 ನೇ ಪ್ರತಿವಾದಿ ರವರ ಕಡೆಯಿಂದ ಪಡೆದುಕೊಂಡಿದ್ದಾರೆ. ಅವರ ಹಣ ಪಡೆದುಕೊಂಡಿದ್ದನ್ನು ನಾನು ಕಣ್ಣಾರೆ ನೋಡಿಲ್ಲ. ಹಣ ಪಡೆದುಕೊಂಡಿದ್ದನ್ನು ನಮ್ಮ ಸಂಬಂಧಿಕರು ಹೇಳಿರುತ್ತಾರೆ.

ಅವರು ಕ್ರಯ ಪತ್ರಗಳಿಗೆ ಸಹಿ ಮಾಡಿದ್ದಾರೆ ಮತ್ತು ಹಣವನ್ನು ಪಡೆದುಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಭಾಗಕ್ಕೆ ಬಂದಿರುವ ಆಸ್ತಿಗಳಿಗೆ ಪ್ರತಿವಾದಿ 1 ರಿಂದ 3 ಮತ್ತು 5 ನಮಗೆ ಯಾವತ್ತು ತೊಂದರೆ ಕೊಟ್ಟಿಲ್ಲ ಮತ್ತು ಯಾವುದೇ ಆಸ್ತಿ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ತೀರಿಕೊಂಡ ನಂತರ ನಾನು ಆಸ್ತಿಯಲ್ಲಿ ಭಾಗ ಕೇಳಿಲ್ಲ. ಈ ದಾವೆ ಹೂಡುವ ಪೂರ್ವದಲ್ಲಿ ನನ್ನ ಸಹೋದರನಿಗೆ ಆಸ್ತಿಯಲ್ಲಿ ಭಾಗ ಕೇಳಿಲ್ಲ. ಆತ ಸ್ವತ್ತನ್ನು ಮಾರಾಟ ಮಾಡಿದ 1 ವರ್ಷದ ನಂತರ ಮಾರಾಟದ ಬಗ್ಗೆ ಗೊತ್ತಾಗಿರುತ್ತದೆ. ಮಾರಾಟ ಆದ ಸ್ವತ್ತಿನ ಮೇಲೆ ನನಗೂ ಹಕ್ಕು ಇದೆ, ಆದ್ದರಿಂದ ಕ್ರಯ ಪತ್ರ ರದ್ದು ಪಡಿಸಿ ಎಂದು ದಾವೆ ಮಾಡಿದ್ದೇನೆ. ನನ್ನ ಸಹೋದರ ಮಾಡಿರುವ ಕ್ರಯ ಪತ್ರಗಳಿಗೆ 1 ರಿಂದ 3 ಮತ್ತು 5 ನೇ ಪ್ರತಿವಾದಿಗಳು ಯಾವುದೇ ರೀತಿ ಜವಾಬ್ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪನ ನಡುವೆ ಭಾಗ ಆಗಿರುವ ಕಾರಣ ಈ ದಾವೆಯನ್ನು ಮಾಡಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 3 ಮತ್ತು 5 ರವರನ್ನು ವಿನಾಕಾರಣ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅವರಿಗೆ ತೊಂದರೆ ಕೊಡಲು ಸುಳ್ಳು ದಾವೆ ಮಾಡಿ, ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 10 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**